ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉತ್ತರ ವಲಯ-4 ಯಲಹಂಕ, ಬೆಂಗಳೂರು-64

ಸಂಖ್ಯೆ:ಸಿ9:ಖಾ.ಶಾ.ಮಾ.ನ 01/2019-20

ದಿನಾಂಕ:15-10-2019

## ಜ್ಞಾಪನ

ವಿಷಯ:- ಒರಾಕಲ್ ಎಜುಕೇಷನ್ ಟ್ರಸ್ಟ್ ಹಲಸೂರು ಬೆಂಗಳೂರು ರವರ ವತಿಯಿಂದ ಜಕ್ಕೂರು ಸರ್ವೆ ನಂಬರ್ 37/1 ನೆಹರು ನಗರ ಶಿವನಹಳ್ಳಿ ಜಕ್ಕೂರು ಯಲಹಂಕ ರೋಡ್ ಬೆಂಗಳೂರು-560064 ಇಲ್ಲಿ ನಡೆಯುತ್ತಿರುವ ವಿನ್ ಮೋರ್ ಅಕಾಡೆಮಿ ಆಂಗ್ಲ ಶಾಲೆಗೆ ಪ್ರಥಮ ಮಾನ್ಯತೆ ಹಾಗೂ 2019-20 ರಿಂದ 2023-24ನೇ ಸಾಲಿನ ವರೆಗೆ ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ:-1)ಕಾರ್ಯದರ್ಶಿ ಒರಾಕಲ್ ಎಜುಕೇಷನ್ ಟ್ರಸ್ಟ್ ಹಲಸೂರು ಬೆಂಗಳೂರು ರವರ ಪತ್ರ ದಿನಾಂಕ:26-09-2019.

2)ಬೇಟಿ ವರದಿಯಂತೆ

*****

**ಪ್ರಸ್ತಾವನೆ:-**

ಒರಾಕಲ್ ಎಜುಕೇಷನ್ ಟ್ರಸ್ಟ್ ಹಲಸೂರು ಬೆಂಗಳೂರು ರವರ ವತಿಯಿಂದ ಜಕ್ಕೂರು ಸರ್ವೆ ನಂಬರ್ 37/1 ನೆಹರು ನಗರ ಶಿವನಹಳ್ಳಿ ಜಕ್ಕೂರು ಯಲಹಂಕ ರೋಡ್ ಬೆಂಗಳೂರು 560064 ಎಂಬ ವಿಳಾಸದಲ್ಲಿ ಅನುದಾನ ರಹಿತವಾಗಿ ನೆಡೆಯುತ್ತಿರುವ ವಿನ್ ಮೋರ್ ಅಕಾಡೆಮಿ ಆಂಗ್ಲ ಶಾಲೆಗೆ ಪ್ರಥಮ ಮಾನ್ಯತೆ ಹಾಗೂ 2019-20 ರಿಂದ 2023-24ನೇ ಸಾಲಿನವರೆಗೆ ಮಾನ್ಯತೆ ನವೀಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಉಲ್ಲೇಖ 02ರ ಬೇಟಿ ವರದಿಯ ಪ್ರಕಾರ ಶಾಲೆಯು ಇಲಾಖಾ ಅನುಮತಿಯಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಶಾಲೆಗೆ ಪ್ರಥಮ ಮಾನ್ಯತೆ ಹಾಗೂ 2019-20 ರಿಂದ 2023-24ನೇ ಸಾಲಿನ ವರಗೆ 01 ರಿಂದ 08ನೇ ತಗರತಿ ವರೆಗೆ ಆಂಗ್ಲ ಮಾಧ್ಯಮದಲ್ಲಿ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ನೀಡಬಹುದಾಗಿದೆ ಎಂದು ಅಭಿಪ್ರಾಯ ನೀಡಿದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಶಾಲೆಗೆ ಪ್ರಥಮ ಮಾನ್ಯತೆ ಹಾಗೂ 2019-20 ರಿಂದ 2023-24ನೇ ಸಾಲಿನವರಗೆ 01 ರಿಂದ 08ನೇ ತರಗತಿ ಆಂಗ್ಲ ಮಾಧ್ಯಮದ ಮಾನ್ಯತೆ ನವೀಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯದರ್ಶಿಗಳು ಒರಾಕಲ್ ಎಜುಕೇಷನ್ ಟ್ರಸ್ಟ್ ಹಲಸೂರು ಬೆಂಗಳೂರು ರವರ ವತಿಯಿಂದ ಜಕ್ಕೂರು ಸರ್ವೆ ನಂಬರ್ 37/1 ನೆಹರು ನಗರ ಶಿವನಹಳ್ಳಿ ಜಕ್ಕೂರು ಯಲಹಂಕ ರೋಡ್ ಬೆಂಗಳೂರು 560064 ಎಂಬ ವಿಳಾಸದಲ್ಲಿ ಅನುದಾನ ರಹಿತವಾಗಿ ನೆಡೆಯುತ್ತಿರುವ ವಿನ್ ಮೋರ್ ಅಕಾಡೆಮಿ ಆಂಗ್ಲ ಶಾಲೆಗೆ ಸಮಗ್ರ ಶಿಕ್ಷಣ ಕಾಯಿದೆ ನಿಯಮ 36(6) (ಬಿ) ಪ್ರಕಾರ ಪ್ರಥಮ ಮಾನ್ಯತೆ ಹಾಗೂ 2019-20 ರಿಂದ 2023-24ನೇ ಸಾಲಿನವರೆಗೆ 01 ರಿಂದ 08ನೇ ತರಗತಿ ಆಂಗ್ಲ ಮಾಧ್ಯಮದ ತಲಾ ಒಂದೊಂದು ವಿಭಾಗಕ್ಕೆ ಶಾಶ್ವತ ಅನುದಾನ ರಹಿತವಾಗಿ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕವಾಗಿ ಮಾನ್ಯತೆ ನವೀಕರಿಸಿದೆ.

**ಷರತ್ತುಗಳು:-**

1) ಶಿಕ್ಷಕರ ಮತ್ತು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪಾಠೋಪಕರಣಗಳು/ಪೀಠೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಬೇಕು.
2) ಅರ್ಹತೆಯುಳ್ಳ ಶಿಕ್ಷಕರನ್ನು ಮಾತ್ರ ನೇಮಕ ಮಾಡಿಕೊಳ್ಳುವುದು.
3) ಶುಲ್ಕ ವಸೂಲಾತಿಗೆ ಇಲಾಖಾ ಅನುಮತಿಯನ್ನು ಪಡೆಯುವುದು.
4) ಸಂಸ್ಥೆಯ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಅವರಿಂದ ಪಡೆದ ಒಪ್ಪಿಗೆ ಪತ್ರದ ಪ್ರತಿಯನ್ನು ಹಾಜರುಪಡಿಸುವುದು.
5) ಶಿಕ್ಷಕರ ಹೆಸರಿನಲ್ಲಿ ಸೇವಾ ವಹಿ ತೆರೆಯಬೇಕು ಹಾಗೂ ಬ್ಯಾಂಕ್ ಮುಖೇನ ಕನಿಷ್ಠ ವೇತನ ವಿತರಣೆ ಮಾಡಬೇಕು.
6) ಮಕ್ಕಳ ದಾಖಲಾತಿಯಲ್ಲಿ ಮೀಸಲಾತಿ ಕಡ್ಡಾಯವಾಗಿ ಪಾಲಿಸುವುದು.
7) ರಾಜ್ಯ ಪಠ್ಯಕ್ರಮ ಹಾಗೂ ಇಲಾಖೆ ನಿಗದಿಗೊಳಿಸಿದ ಪಠ್ಯ ಪುಸ್ತಕಗಳನ್ನು ಉಪಯೋಗಿಸುವುದು.
8) ಶಾಲಾ ಕಟ್ಟಡ ಮತ್ತು ಆವರಣದಲ್ಲಿ ಬೆಂಕಿ ಅಪಘಾತ ಮತ್ತುನ ಇತರೆ ಅಪಘಾತಗಳಿಂದ ತೊಂದರೆಯಾಗದಂತೆ ಶಾಲಾ ಕಟ್ಟಡದ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ವಹಿಸತಕ್ಕದ್ದು.
9) ಶಿಕ್ಷಕರುಗಳ ನೇಮಕಾತಿಯನ್ನು ಶಿಕ್ಷಕ/ವಿದ್ಯಾರ್ಥಿಗಳ ಅನುಪಾತ 1:40:50 ರಂತೆ ಮಾಡಬೇಕು.

10) ಶಿಕ್ಷಣ ಕಾಯಿದೆಯ ಎಲ್ಲಾ ನಿಯಮಗಳನ್ನು ಸರ್ಕಾರ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

11) ಶಿಕ್ಷಣ ಕಾಯ್ದೆಯನ್ವಯ ಶಾಲಾ ಸುರಕ್ಷತೆ ಬಗ್ಗೆ ಕ್ರಮ ವಹಿಸುವುದು.

12) ಇಲಾಖೆಗೆ ಅಗತ್ಯವಾದ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಸಕಾಲದಲ್ಲಿ ನೀಡತಕ್ಕದ್ದು.

13) ಆರ್.ಟಿ.ಇ ಅಡಿಯಲ್ಲಿ ನೊಂದಣಿಯನ್ನು ಕಡ್ಡಾಯವಾಗಿ ಪಡೆಯುವುದು.

14) ಶುಲ್ಕದ ವಿವರ ಮತ್ತು ಶಾಳಾ ಅನುಮತಿ ವಿವರವನ್ನು ಶಾಲಾ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.

15) ಮಕ್ಕಳ ಸುರಕ್ಷತೆ ಬಗ್ಗೆ ಶಾಲೆಯಲ್ಲಿ ಸಿ.ಸಿ.ಟಿ.ವಿ ಅಳವಡಿಸುವುದು.

16) ಈ ಆದೇಶವು ಸರ್ಕಾರದ ಆದೇಶ ಸಂಖ್ಯೆ ಇಡಿ 709ಪಿ.ಜಿಸಿ 2017 ಬೆಂಗಳೂರು ದಿನಾಂಕ:07-03-2018ರ ಪ್ರಕಾರ ಮಾನ್ಯತೆ ನವೀಕರಣದ ಸಂಸ್ಕರಣ ಶುಲ್ಕ ಮತ್ತು ಸ್ಥಿರನಿಧಿ ಠೇವಣಿ ಪಾವತಿಸುವ ನಿಬಂಧನೆಗೆ ಒಳಪಟ್ಟಿರುತ್ತದೆ.

(ಟಿ.ಎನ್.ಕಮಲಾಕರ)
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರ ವಲಯ-4 ಯಲಹಂಕ
ಯಲಹಂಕ, ಬೆಂಗಳೂರು-64.

ಇವರಿಗೆ:-

1) ಕಾರ್ಯದರ್ಶಿಗಳು ಒರಾಕಲ್ ಎಜುಕೇಷನ್ ಟ್ರಸ್ಟ್ ಹಲಸೂರು ಬೆಂಗಳೂರು ರವರ ವತಿಯಿಂದ ಜಕ್ಕೂರು ಸರ್ವೆ ನಂಬರ್ 37/1 ನೆಹರು ನಗರ ಶಿವನಹಳ್ಳಿ ಜಕ್ಕೂರು ಯಲಹಂಕ ರೋಡ್ ಬೆಂಗಳೂರು 560064.

2) ಕಛೇರಿ ಪ್ರತಿ